*ಮಹಾದೇವಿ ಟೀಚರ್, ಶಿವಮೊಗ್ಗ*
*ಬೆಳಿಗ್ಗೆ ವಾಕಿಂಗ್ ನೆಪದಲ್ಲಿ ಯಾರದೋ ಮನೆಯ ಮುಂದಿನ ಹೂ ಕೀಳುವವರಿಗೆ ನಿಮ್ಮ ಸಲಹೆ?*



ನೀಡಲಾರೆ, ಕ್ಷಮಿಸಿ. ಅಷ್ಟು ಬೇಗ ನಾನು ಎದ್ದಿರುವುದಿಲ್ಲ!

*ಪಿ.ಎಸ್. ಶ್ರೀವತ್ಸ, ಬೆಂಗಳೂರು*
*ಅಕಸ್ಮಾತ್ ಪಟಾಕಿ ಶಬ್ದಕ್ಕೆ ನಾಯಿಗಳು ಹೆದರಿಕೊಳ್ಳದೇ ಇದ್ದಿದ್ದರೆ...?*
ಬಾಲಕ್ಕೆ ಕಟ್ಟಿದ ಪಟಾಕಿಯಿಂದ ನಗರವನ್ನೇ ನಾಯಿಪಾಡಾಗಿಸುತ್ತಿದ್ದವು!

*ಜೆ.ಆರ್. ಆದಿನಾರಾಯಣಮುನಿ, ಆದಿವಾಲ*
*ಹೃದಯದ ಕದ ತೆರೆಯುವುದು ಯಾವಾಗ?*
ಹಾರ್ಟ್ ಆಪರೇಷನ್ ಆದಾಗ!

*ಬಿಂಡಿಗನವಿಲೆ ರಂಗರಾಜು, ಬೆಂಗಳೂರು*
*ಗಳಿಸಿದ್ದೆಲ್ಲವನ್ನೂ ಉಳಿಸಲೇಬೇಕೆಂಬ ಅಭ್ಯಾಸ ಬೆಳೆದು ಖರ್ಚು ಮಾಡಲು ಮನಸ್ಸೇ ಬರುತ್ತಿಲ್ಲವಲ್ಲಾ...?*



ಡೋಂಟ್ ವರಿ; ಕಡೆಯಲ್ಲಿ ನರ್ಸಿಂಗ್ ಹೋಂನವರು, ಅಪರಕರ್ಮಿಗಳು ನಿಮ್ಮ ಹೊರೆ ಇಳಿಸುತ್ತಾರೆ.

*ರಾಜಶೇಖರ ರೆಡ್ಡಿ, ಹಿಂದೂಪುರ*
*ಅಶ್ಲೀಲ ಪ್ರಶ್ನೆಗಳನ್ನು ಕೇಳುವುದು ಬೇಡವೆಂದಾದರೆ ಅಶ್ಲೀಲ ಪದಗಳು ನಿಘಂಟಿನಲ್ಲಿ ಯಾಕಿದೆ?*
ಪ್ರೈವೇಟಾಗಿ ಪೊಲಿಟಿಷಿಯನ್ಸ್‌ನ ಬಯ್ಯಲಿಕ್ಕೆ ರೆಡ್ಡಿಗಾರು.

*ಬಿ.ಎಂ. ಪರಶಿವಮೂರ್ತಿ, ಬೆಂಗಳೂರು*
*ಬ್ರಹ್ಮಚಾರಿಗೂ, ವಿಧುರನಿಗೂ ಏನು ವ್ಯತ್ಯಾಸ?*
ಬ್ರಹ್ಮಚಾರಿ ಕುವರ, ವಿಧುರ ಕು–ವರ!

*ಆರ್. ಮಧುಸೂದನ್, ಹಾಸನ*
*ಕಷ್ಟದಲ್ಲಿ ಸಹಾಯ ಮಾಡಿದವರಿಗಿಂತಲೂ ನೋವು ಕೊಟ್ಟವರೇ ಕೊನೆಯ ತನಕ ನೆನಪಾಗುತ್ತಾರಲ್ಲಾ...?*
ತಿಳಿಯಿತು ಬಿಡಿ; ನಿಮಗೆ ಮದುವೆಯಾಗಿದೆ, ಅಪ್ಪನಿಗಿಂತಲೂ ಹೆಚ್ಚು ಮಾವನ ನೆನಪು ಕಾಡುತ್ತಿದೆ!

*ತಾರಾನಾಥ್ ಜೆ. ಮೋಸ್ತ, ಶಿರೂರು*
*ಕರ್ನಾಟಕ ಸರಕಾರದಲ್ಲಿ ಯಾರನ್ನೂ ಟೀಕಿಸದ, ಯಾರಿಂದಲೂ ಟೀಕೆಗೊಳಗಾಗದ ಸಚಿವ ಯಾರು?*
ಕರ್ನಾಟಕವಲ್ಲ, ವಿಶ್ವದಲ್ಲೇ ಯಾರೂ ಇಲ್ಲ; ಕನಿಷ್ಠಪಕ್ಷ ಅವರ ಹೆಂಡಂದಿರ ಟೀಕೆಗಾದರೂ ಎಲ್ಲರೂ ಒಳಗಾದವರೇ!

*ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ*
*ಹೆಣ್ಣು ಕೊಟ್ಟ ಮಾವನೆಂದರೆ ಕಣ್ಣು ಕೊಟ್ಟ ದೇವರು ಎನ್ನಲು ಕಾರಣವೇನು?*
ಹೋಲಿಕೆ ಸರಿಯಿಲ್ಲ ಬಿಡಿ; ದೇವ ಕೊಡುವುದು ಎರಡು ಕಣ್ಣು, ಮಾವ ಕೊಡುವುದು ಒಂದೇ ಹೆಣ್ಣು.

*ಅರಕೆರೆ ಪಿ. ಸುರೇಶ್, ಭದ್ರಾವತಿ*
*ನಿಮ್ಮ ಬದುಕಿನಲ್ಲಿ ಆತ್ಮತೃಪ್ತಿ ಕೊಡುವ ಅತ್ಯಂತ ಅಪೂರ್ವವಾದ ಕೆಲಸ ಯಾವುದು?*
ಶುದ್ಧ ಹಾಸ್ಯದ ಮೂಲಕ ಸಂದೇಶ ಸಾರುವುದು.

*ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ*
*ಈ ಕಾಲದಲ್ಲೂ ಆಣೆ, ಪ್ರಮಾಣಗಳು ನಡೆಯುತ್ತವೆಯಾ?*
ಪ್ರಮಾಣ ಮಾಡಿ ಹೇಳ್ತಿದ್ದೀನಿ, ಇವೆಲ್ಲಾ ದೇವರಾಣೆ ನಡೆಯಲ್ಲ!

*ಲೂಯಿಸ್ ಫರ್ನಾಂಡಿಸ್, ಶಿರಸಿ*
*ಹೋಯ್ ಅಣ್ಣೋ, ಈವಾಗ್ ಎಲ್ಲಾ ವ್ಯವಹಾರಾನೂ ಕೋಟಿಯಾಗ್ ನಡಿಯಾಕ್ ಹತ್ತದ; ಒಸಿ ಕೋಟಿಯಾಗ್ ಎಷ್ ಸೊನ್ನೆ ಐತೆ ಏಳಣ್ಣೋ...?*
ಬ್ಯಾಡ ಕಣಣ್ಣೋ... ತಿಳ್ಕೊಂಬುಟ್ರೆ ನೀನೂ ಮಂತ್ರಿಗೋಳ್ ತರಾನೇ ಆಳಾಗ್ ಒಗ್ತೀಯ.

*ಆರ್. ಕಲ್ಯಾಣಪ್ಪ, ಮಂಗಳೂರು*
*ಮುಖ್ಯಮಂತ್ರಿಗಳು ಹೆಂಗಸರಿಗೆ ಸೀರೆ ಕೊಡುವರು; ಗಂಡಸರಿಗೆ ಏನನ್ನು ಕೊಡುವರು?*
ತಲೆನೋವು! ಆ ಸೀರೆಗೆ ಮಿಕ್ಕ ಮ್ಯಾಚಿಂಗ್‌ಗಳನ್ನೆಲ್ಲಾ ಗಂಡಸರೇ ಕೊಡಿಸಬೇಕಲ್ಲಾ...!

## ಬಹುಮಾನಿತ ಪ್ರಶ್ನೆ

*ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ*
*ಲ್ಯಾಪ್‌ಟಾಪ್ ಮೂರನೇ ಜನರೇಷನ್‌ನ ಮೊದಲ ಹೆಂಡತಿಯಂತೆ?*
ನಿಜ. ಅಮ್ಮ ಮದರ್‌ಬೋರ್ಡ್, ಹೆಂಡತಿ ಲ್ಯಾಪ್‌ಟಾಪ್, ಮಕ್ಕಳು ಫ್ಲಾಪಿಗಳು. ಅತ್ತೆ ವೈರಸ್.

*ರಾಜಶೇಖರ ಹಾದಿಮನಿ, ಧಾರವಾಡ*
*ಕೆಟ್ಟವರಿಗೆ ರಕ್ಷಣೆ ಕೊಟ್ಟರೆ ಒಳ್ಳೆಯವರಿಗೆ ಹಿಂಸೆ ಕೊಟ್ಟಂತೆ ಎನ್ನುತ್ತಾರೆ; ನೀವೇನಂತೀರಿ?*
ನಿಜ. ಕೆಟ್ಟ worryಗೆ ರಕ್ಷಣೆ ಕೊಡಬಾರದು.

*ನಾರಾಯಣ, ಗುಗ್ಗರಹಟ್ಟಿ*
*ಹೆಚ್ಚಾಗಿ ಹೆರಿಗೆಗಳು ರಾತ್ರಿಯ ವೇಳೆಯೇ ಆಗುತ್ತವೆ; ಏಕೆ?*
ಬೆಳಗ್ಗೆ ಹುಟ್ಟಿದರೆ ಅಮ್ಮ, ಅಜ್ಜಿ, ನರ್ಸ್, ಲೇಡಿ ಡಾಕ್ಟರ್‌ಗಳ ಮಾತಿನ ಮಧ್ಯೆ ತನ್ನ ಅಳು ಕೇಳಿಸುವುದಿಲ್ಲವೆಂದು ಮಗುವಿಗೆ ಗೊತ್ತು!

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ನಾರದನ ತಂತ್ರಕ್ಕೂ, ಶಕುನಿಯ ಕುತಂತ್ರಕ್ಕೂ ಏನು ವ್ಯತ್ಯಾಸ?*



ನಾರದನ ತಂತ್ರದಲ್ಲಿ ನಾದ, ಶಕುನಿಯ ತಂತ್ರದಲ್ಲಿ ಶನಿ!

*ಎನ್. ಪ್ರಕಾಶ್, ದೇವನಹಳ್ಳಿ*
*ತಾವು ಬೆಳ್ಳಗಿರಬೇಕೆಂದು ಬಯಸುವ ಪ್ರತಿಯೊಬ್ಬರೂ ತಲೆಗೂದಲು ಬೆಳ್ಳಗಾದ ತಕ್ಷಣ ಖಿನ್ನರಾಗುವುದೇಕೆ?*
ತುಂಬುಗಲ್ಲ, ಒಡನಡು ಇದ್ದರೆ ಸುಂದರಿ; ಒಡಗಲ್ಲ, ತುಂಬುನಡು ಇದ್ದರೆ? ಇದೂ ಹಾಗೆಯೇ!

*ಬಾಬಾ ಮಾಳೇಕೊಪ್ಪಮಠ, ಗದಗ*
*ಪಟ್ಟಣಗಳಲ್ಲಿ ನಿರ್ಜನ ರಸ್ತೆಗಳಲ್ಲಿ ರಾತ್ರಿಯೆಲ್ಲಾ ದೀಪಗಳು ಬೆಳಗುವುದು ಕಳ್ಳರ ಅನುಕೂಲಕ್ಕೋ, ಪೊಲೀಸರ ಅನುಕೂಲಕ್ಕೋ?*
ವಿದ್ಯುತ್ ಇಲಾಖೆಯ ಅನುಕೂಲಕ್ಕೆ!

*ವೆಂಕಟೇಶ ಎಂ. ಪೈ, ಹೊನ್ನಾವರ*
*ಜೀವನದಲ್ಲಿ ಸಾಧನೆಗೆ ಗುರಿ, ಗುರು ಎರಡೂ ಏಕೆ ಬೇಕು?*
ಕುರಿಯಾಗದೆ, ಸಮಾಜಕ್ಕೆ ಕುರುವಂತಾಗದಿರಲು!

■ ರಾಮ್